ಡ್ರೈವ್ ಮಾಡುವ ದೃಷ್ಟಿಯಿಂದ ಅವರಿಗೆ ಈ ಕೆಲಸವನ್ನು ಒಪ್ಪಿಸಲಾಯಿತು. ಇದರಲ್ಲಿ ಕೆಲವಾರು ಕೇಸ್‌ಗಳನ್ನು ಅವರು ಪರಿಶೀಲನೆ ಮಾಡಿದ್ದಾರೆ. ಮತ್ತೆ ಕೆಲವನ್ನು ಪರಿಶೀಲನೆ ಮಾಡುವ ಹಂತದಲ್ಲಿ ಇವೆ.

ಅಧ್ಯಕ್ಷರು.—ತಾವು ಆ ರೀತಿ ಮಾಡುವುದಕ್ಕೆ ಆಕ್ಪೇನಲ್ಲಿ ಬರುವುದಿಲ್ಲವೆಂದು ಮಾನ್ಯ ಸದಸ್ಯರು ಹೇಳುತ್ತಿದ್ದಾರೆ. ತಾವು ಮಾಡಿರುವುದು ಈಗ ನಿಮ್ಮ ಜೂರಿಸ್‌ಡಿಕ್‌ಷನ್‌ನಲ್ಲಿ ಬರುವುದಿಲ್ಲವೆಂದು ಹೇಳುತ್ತಿದ್ದಾರೆ.

ಶ್ರೀ ಮಲ್ಲಿಕಾರ್ಜುನ ಎಂ. ಖಾರ್ಗೆ.—ಮಾನ್ಯ ಅಧ್ಯಕ್ಷರೇ, ನಾನು ಇದನ್ನು ಪರಿಶೀಲನೆ ಮಾಡಿಸುತ್ತೇನೆ.

Lift Irrigation Scheme in Afzalpur Taluk

272. SRI M.Y. PATIL (Afzalpur).—Will the Minister for Transport and Minor Irrigation be pleased to state.—

(a) the total number of Lift Irrigation Schemes sanctioned in Afzalpur Taluk and the dates of their sanction;

(b) out of them, the number of Lift Irrigation Schemes completed and the extent of land which has got irrigation facility;

(c) the number of incompleted schemes;

(d) the reasons therefore and when they would be completed?

SRI M. M. J. SADYOJATHA (Minister for Transport and Minor Irrigation).—

(a) In all sanction has been accorded for Ten Lift Irrigation Schemes in Afzalpur Taluk :

1.	Lift Irrigation Scheme in Deval Ganigapur	31-10-1968
2.	L.I.S. in Seshagiriwadi	20-12-1965
3.	L.I.S. in Dikasanga	10-11-1972
4.	L.I.S. in Gourabi	25-5-1973
5.	L.I.S. in Bandadarwad	20-9-1968
6.	L.I.S. in Fattarga	5-9-1973
7.	L.I.S. in Shivapura	25-5-1973
8.	L.I.S. in Bosga	20-5-1973
9.	L.I.S. in Chinmalla	30-9-1973
10.	L.I.S. in Choudapura	21-9-1976

(b) 3 Schemes have been completed out of ten schemes. 159 acres of land has got irrigation facility.

(c) Work of seven schemes are in progress,

(d) Lift Irrigation Schemes are difficult to achieve and of special nature. These schemes are on the bank of river and are at inland. Working time is far less as there are floods in Bhima River. It is possible to work only between the months of February to May and scarcity of power is also one of the reasons. For these reasons, the remaining seven schemes are expected to be completed by June, 1982.

ಶ್ರೀ ಎಂ. ವೈ. ಪಾಟೀಲ್.—ಮಾನ್ಯ ಅಧ್ಯಕ್ಷರೇ. ನನ್ನ ತಾಲ್ಲೂಕಿನಲ್ಲಿ ಯಾವ ಯಾವ ತಾರೀಖಿನ ಗಳಲ್ಲಿ ಏತ ನೀರಾವರಿ ಯೋಜನೆಗಳನ್ನು ಮಂಜೂರು ಮಾಡಲಾಗಿದೆ ಎಂದು ನಾನು ಪ್ರಶ್ನೆ ಕೇಳಿದ್ದಕ್ಕೆ ಮಾನ್ಯ ಮಂತ್ರಿಗಳು ತಮ್ಮ ಉತ್ತರದಲ್ಲಿ ಸುಮಾರು ೧೦ ಏತ ನೀರಾವರಿ ಯೋಜನೆಗಳು ಇವೆ. ಈ ಎಲ್ಲಾ ಏತ ನೀರಾವರಿ ಯೋಜನೆಗಳು ಸುಮಾರು ೧೯೮೮ನೇ ಇಸವಿಯಲ್ಲಿ ಮಂಜೂರಾತಿಯನ್ನು ಪಡೆದಂತಹ ಯೋಜನೆಗಳಾಗಿವೆ. ಆದರೆ ಇದುವರೆವಿಗೂ ಈ ಯೋಜನೆ ಪೂರ್ಣಗೊಂಡಿಲ್ಲ, ಇದರಿಂದ ರೈತರಿಗೆ ಅನುಕೂಲವಾಗಿಲ್ಲ. ಮತ್ತೆ ಈ ೧೦ ಯೋಜನೆಗಳಲ್ಲಿ ೩ ಯೋಜನೆಗಳು ಮಾತ್ರ ಪೂರ್ತಿಯಾಗಿವೆ ಎಂದು ತಿಳಿಸಿದ್ದಾರೆ. ಮತ್ತೆ ಉಳಿದ ಯೋಜನೆಗಳು ಜೂನ್ ತಿಂಗಳ ವೇಳೆಗೆ ಪೂರ್ಣಗೊಳ್ಳುವ ನಿರೀಕ್ಷೆ ಇದೆ ಎಂದು ಮಾನ್ಯ ಮಂತ್ರಿಗಳು ತಿಳಿಸಿದ್ದಾರೆ. ಆದರೆ ನಾವು ಈಗ ೧೯೮೨ನೇ ಜುಲೈ ತಿಂಗಳಿನಲ್ಲಿ ಇದ್ದೇವೆ. ಆಗಲೆ ಈ ಯೋಜನೆಗಳನ್ನು ಯಾವಾಗ ಪೂರ್ಣಗೊಳಿಸುತ್ತಾರೆ ಎನ್ನುವುದನ್ನು ನಿಗದಿ ಪಡಿಸಬೇಕು.

ಶ್ರೀ ಬಿ. ಬಿ. ಚಿಮ್ಮನಕಟ್ಟಿ.—ಮಾನ್ಯ ಅಧ್ಯಕ್ಷರೇ, ಒಟ್ಟು ೧೦ ಯೋಜನೆಗಳನ್ನು ಸರ್ಕಾರದವರು ಕೈಗೊಂಡು ಇದರಲ್ಲಿ ಈಗಾಗಲೇ ಸುಮಾರು ೩ ಯೋಜನೆಗಳನ್ನು ಪೂರ್ಣಗೊಳಿಸಿದ್ದೇವೆ. ಈ ಮೂರು ಯೋಜನೆಗಳು ಪೂರ್ಣಗೊಂಡಿರುವುದರಿಂದ ಸುಮಾರು ೧೨೭೦ ಎಕರೆ ಜಮೀನು ಅಭಿವೃದ್ಧಿ ಮಾಡುವುದಕ್ಕೆ ಸಾಧ್ಯವಾಗುತ್ತದೆ ಇನ್ನು ಉಳಿದ ೧೫೯ ಎಕರೆ ಜಮೀನನ್ನು ಅಭಿವೃದ್ಧಿ ಮಾಡುವುದಕ್ಕಾಗಿ ಲೋಕಲ್ ಇರಿಗೇಷನ್ ಕೆಲಸ ತೆಗೆದುಕೊಂಡು ಮುಗಿಸುವಂತಹ ಯೋಜನೆಗಳನ್ನು ಸಹ ಹಾಕಿಕೊಂಡಿದ್ದೇವೆ. ಇದಕ್ಕೆ ಆ ಪ್ರದೇಶದ ರೈತರು ಸಹ ಸಹಕಾರ ಕೊಡಬೇಕಾಗುತ್ತದೆ. ಈ ರೈತರು ಸಹಕಾರ ಕೊಡದಿದ್ದರೆ ಸರ್ಕಾರದವರು ಏನು ಮಾಡುವುದಕ್ಕೂ ಸಹ ಸಾಧ್ಯವಾಗುವುದಿಲ್ಲ. ಈಗ ಇನ್ನು ಉಳಿದಂತಹ ೭ ಯೋಜನೆಗಳನ್ನು ೧೯೮೨-೮೩ನೇ ಸಾಲಿನಲ್ಲಿ ಪೂರ್ಣಗೊಳಿಸುತ್ತೇವೆ. ನಾವು ಈಗಾಗಲೇ ಇರಿಗೇಷನ್ ಡೆವಲಪ್‌ಮೆಂಟ್ ಸಿವಿಲ್ ವರ್ಕ್ಸ್ ತೆಗೆದುಕೊಂಡು ಕೆಲಸವನ್ನು ಮಾಡುತ್ತಿದ್ದೇವೆ ಕೆ.ಇ.ಬಿ.ಯವರು ಸಹ ನಮಗೆ ಸಹಕಾರ ಕೊಡಬೇಕಾಗುತ್ತದೆ. ಅಂದರೆ ನಾವು ಉಳಿದ ಈ ೭ ಯೋಜನೆಗಳನ್ನು ೧೯೮೨-೮೩ನೇ ಸಾಲಿನಲ್ಲಿ ಮುಗಿಸಿಕೊಡುತ್ತೇವೆ ಎನ್ನುವ ಭರವಸೆಯನ್ನು ಮಾನ್ಯ ಸದಸ್ಯರಿಗೆ ಕೊಡಬಯಸುತ್ತೇನೆ.

ಶ್ರೀ ಎಂ. ವೈ. ಪಾಟೀಲ್.—ಮಾನ್ಯ ಅಧ್ಯಕ್ಷರೇ. ಸುಮಾರು ೧೪ ವರ್ಷಗಳಿಂದ ಈ ೩ ಯೋಜನೆಗಳನ್ನು ಮಾತ್ರ ಪೂರ್ಣಗೊಳಿಸಿದ್ದು ಇನ್ನು ಉಳಿದದ್ದನ್ನು ಕೇವಲ ೧೯೮೨ ೮೩ನೇ ಸಾಲಿನಲ್ಲಿ ಯಾವ ರೀತಿಯಲ್ಲಿ ಮುಗಿಸಿಕೊಡುತ್ತಾರೆ. ಮಾನ್ಯ ಮಂತ್ರಿಗಳು ಹೇಳುವ ಮಾತು ಬಹಳ ಸತ್ಯಕ್ಕೆ ದೂರವಾದುದು. ಆದ್ದರಿಂದ ನಾನು ಹೇಳುವುದೇನೆಂದರೆ, ಅಲ್ಲಿನ ಲೋಕೋಪಯೋಗಿ ಇಲಾಖೆಯ ಒಬ್ಬ ಅಸಿಸ್ಟೆಂಟ್ ಎಗ್ಸಿಕ್ಯೂಟೀವ್ ಇಂಜನೀಯರ್‌ಗೆ ತುಂಬಾ ಕೆಲಸವಿರುತ್ತದೆ. ಅವರು ಆ ಕೆಲಸವನ್ನು ಮಾಡುವುದು ಬಿಟ್ಟು ಈ ಕೆಲಸವನ್ನು ಮಾಡುವುದಿಲ್ಲ, ಆದ್ದರಿಂದ ಮಾನ್ಯ ಮಂತ್ರಿಗಳು ಈ ಕಡೆ ಸ್ವಲ್ಪ ಗಮನ ಹರಿಸಬೇಕು. ಮತ್ತು ಅಲ್ಲಿ ಬೇಕಾದಷ್ಟು ಸಹಾಯ ಮಾಡಿ ಸರಿಯಾದಂತಹ ಅಧಿಕಾರಿಗಳು ಇಲ್ಲದಿದ್ದರೆ ಏನು ಪ್ರಯೋಜನವಾಗುತ್ತದೆ ? ಆದ್ದರಿಂದ ನೀವು ಸರಿಯಾದಂತ ಅಧಿಕಾರಿಗಳನ್ನು ನೇಮಕ ಮಾಡಿ ಅಲ್ಲಿನ ಯೋಜನೆಗಳು ಫಲಪ್ರದವಾಗುವಂತೆ ಮಾಡುವುದು ಒಳ್ಳೆಯದು.

ಶ್ರೀ ಬಿ. ಬಿ. ಚಿಮ್ಮನಕಟ್ಟಿ.—ಮಾನ್ಯ ಅಧ್ಯಕ್ಷರೇ. ಇದರಲ್ಲಿ ಏತ ನೀರಾವರಿ ಯೋಜನೆಯ ಕೆಲಸ ಕಾರ್ಯಗಳಿಗೆ ಕಾಲಮಿತಿ ಇರುವುದರಿಂದ ಕೆಲಸದಲ್ಲಿ ನಿಧಾನವಾಗಿರಬಹುದು. ಹೆಚ್ಚಿನ ಕೆಲಸಗಳಿಗೆ ಅನೇಕ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೇವೆ. ಏತ ನೀರಾವರಿ ಯೋಜನೆಗಳಲ್ಲಿ ವಿದ್ಯುತ್ ಸಂಪರ್ಕ ಒದಗಿಸಿಕೊಡುವುದು ಮೊದಲಾದ ಅನೇಕ ಸಮಸ್ಯೆಗಳಿವೆ. ಆ ಪ್ರದೇಶಗಳಲ್ಲಿರತಕ್ಕಂಥ ರೈತರನ್ನು

ಮಂಂದಕ್ಕೆ ತರಬೇಕು ಮತ್ತು ಅವರ ಶ್ರಮವನ್ನು ಈ ಯೋಜನೆಗಳಲ್ಲಿ ಉಪಯೋಗಿಸಿಕೊಳ್ಳುವುದಕ್ಕಾಗಿ ಸರ್ಕಾರದವರು ಪ್ರತಿಯೊಂದು ಏತ ನೀರಾವರಿ ಯೋಜನೆಗೂ ಸ್ಥಳೀಯ ವಿಧಾನಸಭಾ ಸದಸ್ಯರೂ ಮಂತ್ರಿ ತಾಲ್ಲೂಕು ಅಭಿವೃದ್ಧಿ ಮಂಡಳಿಯ ಅಧ್ಯಕ್ಷರನ್ನು ಒಳಗೊಂಡ ಒಂದು ಸಲಹಾ ಸಮಿತಿಯನ್ನು ಮಾಡಿರುವುದರಿಂದ ಯೋಜನೆಯ ಪ್ರಗತಿಯನ್ನು ಪರಿಶೀಲನೆ ಮಾಡುವುದಕ್ಕೆ ಮತ್ತು ಕೆಲಸಕಾರ್ಯಗಳು ಮಂದಗತಿಯಿಂದ ಸಾಗುತ್ತಿದ್ದರೆ ಆವುಗಳು ತೀವ್ರಗತಿಯಿಂದ ನಡೆಯುವುದಕ್ಕೆ ಅವರುಗಳು ಸಲಹೆ ಸೂಚನೆಗಳನ್ನು ಕೊಡುತ್ತಾರೆ. ಮಾನ್ಯ ಸದಸ್ಯರೂ ಕೂಡ ಸಲಹೆಗಳನ್ನು ಕೊಡಬಹುದು.

ಶ್ರೀ ಎಂ. ವೈ. ಪಾಟೀಲ್.—ಕಳೆದ ಹದಿನಾರು ವರ್ಷಗಳಿಂದ ಈ ಯೋಜನೆಗಳು ನಡೆದಿವೆ. ಆದರೆ ಆಲ್ಲಿರತಕ್ಕಂತ ತಾಂತ್ರಿಕ ಸಿಬ್ಬಂದಿ ವರ್ಗ ಏನೂ ಸಾಲದು. ಆಸಿಸ್ಟೆಂಟ್ ಎಕ್ಸಿಕ್ಯೂಟಿವ್ ಇಂಜನಿಯರ್ ತಾಲ್ಲೂಕು ಬೋರ್ಡ್ ವ್ಯಾಪ್ತಿಯಲ್ಲಿ ಸಿಗುವುದಿಲ್ಲ. ಹೆಚ್ಚಿನ ಪ್ರಮಾಣದ ಸಿಬ್ಬಂದಿವರ್ಗದವರನ್ನು ಒದಗಿಸದೇ ಹೋದರೆ ಇನ್ನೂ ಹದಿನಾರು ವರ್ಷಗಳಾದರೂ ಈ ಯೋಜನೆ ಮುಗಿಯುವುದಿಲ್ಲ ಏಳು ಯೋಜನೆಗಳಲ್ಲಿ ಒಂದನ್ನಾದರೂ ಮುಗಿಸಿದ್ದೀರಾ

ಶ್ರೀ ಬಿ. ಬಿ. ಚಿಮ್ಮನಕಟ್ಟಿ.—ಎಲ್ಲಾ ಏಳು ಯೋಜನೆಗಳನ್ನು ೧೯೮೨-೮೩ರ ಅವಧಿಯೊಳಗೆ ಮುಗಿಸಬೇಕೆಂದು ನಿರ್ಧಾರ ಮಾಡಿ ಸರ್ಕಾರ ಈ ದಿಶೆಯಲ್ಲಿ ಬೇಕಾದ ಪ್ರಯತ್ನಗಳನ್ನು ಮಾಡುತ್ತಿದೆ.

Construction of Primary School Buildings in Afzalpur Taluk

283 SRI M. Y. PATIL (Afzalpur).—Will the Minister of State for Primary and Secondary Education be pleased to state.—

(a) the Schemes proposed by the Government for Educational Reforms considering the importance of Primary Education ;

(b) whether it has come to the notice of Government that there is need of about 85 teachers at Afzalpur Taluk ;

(c) whether it has come to the notice of the Government that there is necessity of class rooms to many villages and the students are studying under the shade of trees in Afzalpur Taluk ;

(d) if so, the measures taken by the Government to remove the difficulties ?

SMT. NAGAMMA C KESHAVAMURTHY (Minister of State for Primary and Secondary Education).—

(a) The Compulsory Primary Education Act is in force. Accordingly free primary education facilities have been provided to the children aged between above 5 years 10 months and within 10 years.

(b) Yes, it has come to the notice of Government.

(c) Yes, it has come to the notice of Government.

(d) The construction of school building has been taken up in two places among the schools without buildings. The building construction works have been commenced in respect of 3 schools out of the 5 schools which are running in the huts and under the shade of trees.